ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಇ-ಮೇಲ್: hednewsletter@gmail.com
ದೂ.ಸಂ. 22370034

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ತಾಂತ್ರಿಕ ಶಿಕ್ಷಣ ಭವನ,
4 ನೇ ಮಹಡಿ, ಅರಮನೆ ರಸ್ತೆ,
ಬೆಂಗಳೂರು-560 001.

ಸಂ.ಡಿಟಿಇ/ಟೆಕಿಪ್ /104/01/2016 ದಿನಾಂಕ: 16.01.2018

## ಸುತ್ತೋಲೆ

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಹಲವಾರು ಕಾರ್ಯಕ್ರಮಗಳು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು ಅವುಗಳನ್ನು ವಿದ್ಯಾರ್ಥಿಗಳ, ಸಿಬ್ಬಂಧಿಯವರ ಹಾಗೂ ಸಾರ್ವಜನಿಕರ ಗಮನಕ್ಕೆ ತರುವುದು ಅಗತ್ಯವಾಗಿದೆ. ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಭಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ಯನ್ನು ನೀಡಲು ಮತ್ತು ಆಡಳಿತದಲ್ಲಿ ಪಾರದರ್ಶಿಕೆಯನ್ನು ತರುವ ಪ್ರಕ್ರಿಯೆಯ ಭಾಗವಾಗಿ ಮಾಸಿಕ ಇ-ಸುದ್ದಿ ಪತ್ರಿಕೆಯನ್ನು ಪ್ರಕಟಿಸಲು ನಿರ್ಧರಿಸಲಾಗಿದ್ದು ಸುದ್ದಿ ಪತ್ರಿಕೆಯನ್ನು ಹೊರತರಲು ಸಂಪಾದಕ ಮಂಡಳಿಯನ್ನು ಈ ಕೆಳಗಿನಂತೆ ರಚಿಸಲಾಗಿದೆ.

1. ಪ್ರಧಾನ ಸಂಪಾದಕರು – ಶ್ರೀ ಮನೋಹರ ಜಿ ನಾಯಕ್
2. ಸಂಪಾದಕರು – ಶ್ರೀ ಶ್ರೀನಾಥ್.ಕೆ
3. ಸದಸ್ಯರು –
    1. ಶ್ರೀ ಶ್ರೀನಿವಾಸ್. ಎಂ.ಎಸ್.
    2. ಶ್ರೀಮತಿ ಮಧುರ. ಎಸ್.ಡಿ.
    3. ಶ್ರೀಮತಿ ಅನುಷ. ಆರ್

ಸಂಪಾದಕ ಮಂಡಳಿಯ ಸದಸ್ಯರು ಇಲಾಖೆಯಿಂದ ಹಾಗೂ ಇಲಾಖೆಗೆ ಸಂಭಂಧಿಸಿದ ವಿದ್ಯಾ ಸಂಸ್ಥೆಗಳಿಂದ ಪ್ರವೇಶ, ಪರೀಕ್ಷೆ, ಫಲಿತಾಂಶ, ಸಾಂಸ್ಕೃತಿಕ ಕಾರ್ಯಗಳು, ಹಾಗೂ ಮಹತ್ವದ ಘಟನೆಗಳಿಗೆ ಸಂಭಂಧಿಸಿದ ವರದಿಗಳನ್ನು ಸಂಗ್ರಹಿಸಿ, ಕ್ರೋಢೀಕರಿಸಿ ಸಂಪಾದಕರಾದ ಶ್ರೀ ಶ್ರೀನಾಥ್ ಇವರಿಗೆ ಪ್ರತಿ ತಿಂಗಳು 25ನೇ ದಿನಾಂಕದೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ.

ಇಲಾಖೆಯ ಎಲ್ಲಾ ಸರ್ಕಾರಿ ಇಂಜನೀಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಸಂಸ್ಥೆಗಳು ಹಾಗೂ ಟೆಕ್ಸ್ಟೈಲ್ ಸಂಸ್ಥೆಗಳ ಪ್ರಾಚಾರ್ಯರುಗಳು ತಮ್ಮ ವಿದ್ಯಾ ಸಂಸ್ಥೆಯ ಕ್ಷೇಮಾಭಿವೃದ್ಧಿ ಅಧಿಕಾರಿಗೆ ತಮ್ಮ ಸಂಸ್ಥೆಗೆ ಸಂಭಂಧಿಸಿದ ಎಲ್ಲ ಸುದ್ದಿಯನ್ನು ಮೇಲೆ ತಿಳಿಸಿದ ಸಂಪಾದಕ ಮಂಡಳಿಗೆ ಫೋಟೋ ಸಮೇತ ಸುದ್ದಿಯನ್ನು ಪ್ರತಿ ತಿಂಗಳ 23ನೇ ದಿನಾಂಕದೊಳಗೆ ಇ- ಮೇಲ್: hednewsletter@gmail.com ಗೆ ವರದಿ ಕಳುಹಿಸುವಂತೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ಹಾಗೂ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿಗಳ ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐಡಿ ಯನ್ನು ತುರ್ತಾಗಿ ಸಂಪಾದಕರಿಗೆ ತಿಳಿಸುವಂತೆ ಎಲ್ಲಾ ಪ್ರಾಚಾರ್ಯರಿಗೆ ತಿಳಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ.